**KARNATAKA NEERAVARI NIGAM LIMITED**

(A Government of Karnataka Undertaking)

**Office Of the Executive Engineer, Karnataka Neeravari Nigama Limited, No.2, Varahi Reservoir Project Division, Siddapura, Udupi Dist.**

## TO WHOM IT MAY CONCERN

**Sub: Reservation of 15.00Acre Government land in survey number 121/P1 of Brahmavara Taluk, 33-Shiruru Village, in lieu of forest land required for Varhi lift Irrigation Project work for CA Purpose to Forest Department.**

**Ref:** Proceeding of District Commissioner, Udupi District vide letter No:ADS.L.N.D/ CRET/2020/E-55093 dated:21.10.2020.

*-*-*-*-*

The above Reference letter is to certify that, as per government order dated 12/10/2020, District Commissioner Udupi District has given approval to reserve the 15.00acre of government land in survey no:121/P1 of Brahmavara Taluk, 33-Shiruru village in the name of forest department for CA Purpose in lieu of forest land required for Varahi Lift Irrigation Project work.

Praveen

EXECUTIVE ENGINEER
Karnataka Neeravari Nigam (L)
No. 2, V. R. P. DIVISION
SIDDAPURA

File No.RD/66/LGA/2020-DO-REVENUE DEPATMENT SEC

ಸಂಖ್ಯೆ:ಕಂಇ 66 ಎಲ್‌ಜಿಎ 2020
**ಅಡಕ:ವಿಶಿಷ್ಟ ಕಡತ**

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:12.10.2020.

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಕಂದಾಯ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು.

**RPAD**

ಇವರಿಗೆ:
ಜಿಲ್ಲಾಧಿಕಾರಿ,
ಉಡುಪಿ ಜಿಲ್ಲೆ,
ಉಡುಪಿ.

ಮಾನ್ಯರೇ,

ವಿಷಯ: ವಾರಾಹಿ ಏತ ನೀರಾವರಿ ಕಾಮಗಾರಿಗೆ ಅಗತ್ಯವಿರುವ ಅರಣ್ಯ ಜಮೀನಿಗೆ ಪರ್ಯಾಯವಾಗಿ ಉಡುಪಿ ಜಿಲ್ಲೆ, ಬ್ರಹ್ಮಾವರ ತಾಲ್ಲೂಕು, 33-ಶಿರೂರು ಗ್ರಾಮದ ಸ.ನಂ.121/ಪಿ1 ರಲ್ಲಿ 15.00 ಎಕರೆ ಸರ್ಕಾರಿ ಜಮೀನನ್ನು ಅರಣ್ಯೀಕರಣ ಉದ್ದೇಶಕ್ಕಾಗಿ ಅರಣ್ಯ ಇಲಾಖೆಗೆ ಮಂಜೂರು ಮಾಡುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ:ಎಲ್.ಎನ್.ಡಿ/ಪಿಡಿಆರ್.ಸಿಆರ್.80/2020/ಇ-55093, ದಿನಾಂಕ:20.08.2020.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಕೋರಿರುವಂತೆ ವಾರಾಹಿ ಏತ ನೀರಾವರಿ ಕಾಮಗಾರಿಗೆ ಅಗತ್ಯವಿರುವ 4.065 ಹೆಕ್ಟೇರ್ ಅರಣ್ಯ ಇಲಾಖೆಯ ಜಮೀನಿಗೆ ಬದಲಿಗೆ ಉಡುಪಿ ಜಿಲ್ಲೆ, ಬ್ರಹ್ಮಾವರ ತಾಲ್ಲೂಕು, 33-ಶಿರೂರು ಗ್ರಾಮದ ಸ.ನಂ.121/ಪಿ1 ರಲ್ಲಿ 15.00 ಎಕರೆ ಸರ್ಕಾರಿ ಜಮೀನನ್ನು ಅರಣ್ಯೀಕರಣ ಉದ್ದೇಶಕ್ಕಾಗಿ ಅರಣ್ಯ ಇಲಾಖೆಗೆ ಮಂಜೂರು ಮಾಡಿ ಹಸ್ತಾಂತರಿಸಲು ಸರ್ಕಾರವು ಅನುಮತಿಸಿದೆ ಎಂದು ತಮಗೆ ತಿಳಿಸಲು ನಾನು ನಿರ್ದೇಶಿತಳಾಗಿದ್ದೇನೆ.

**"ವಿಶಿಷ್ಟ ಕಡತವನ್ನು ಇದರೊಂದಿಗೆ ಲಗತ್ತಿಸಿ, ಹಿಂದಿರುಗಿಸಿದೆ"**

ತಮ್ಮ ವಿಶ್ವಾಸಿ
Vimalamma C
**(ವಿಮಲಮ್ಮ.ಸಿ)** 12/10/2020
ಪೀಠಾಧಿಕಾರಿ
ಕಂದಾಯ ಇಲಾಖೆ (ಭೂ ಮಂಜೂರಾತಿ-2).

Scanned with CamScanner

ನಂ: ಎಡಿಸ್ ಎಲ್.ಎನ್.ಡಿ/ಪಿಡಿಆರ್./ಸಿಆರ್.80/2020/E-55093 ದಿನಾಂಕ:21/10/2020

## ಜಿಲ್ಲಾಧಿಕಾರಿಯವರು ಉಡುಪಿ ಜಿಲ್ಲೆ, ಇವರ ನಡವಳಿ

ವಿಷಯ: ವಾರಾಹಿ ಏತ ನೀರಾವರಿ ಕಾಮಗಾರಿಗೆ ಅಗತ್ಯವಿರುವ ಅರಣ್ಯ ಜಮೀನಿಗೆ ಪರ್ಯಾಯವಾಗಿ ಉಡುಪಿ ಜಿಲ್ಲೆ, ಬ್ರಹ್ಮಾವರ ತಾಲೂಕು 33 ಶಿರೂರು ಗ್ರಾಮದ ಸ.ನಂಬ್ರ 121/ಪಿ1 ರಲ್ಲಿ 15.00 ಎಕ್ರೆ ಸರ್ಕಾರಿ ಜಮೀನನ್ನು ಅರಣ್ಯೀಕರಣ ಉದ್ದೇಶಕ್ಕಾಗಿ ಅರಣ್ಯ ಇಲಾಖೆಗೆ ಮಂಜೂರು ಮಾಡುವ ಬಗ್ಗೆ

ಉಲ್ಲೇಖ:1. ಕಾರ್ಯಪಾಲಕ ಇಂಜಿನಿಯರ್.ಕರ್ನಾಟಕ ನೀರಾವರಿ ನಿಗಮ ನಿಯಮಿತ,ನಂ -2 ವಾರಾಹಿ ಜಲಾಶಯ ಯೋಜನಾ ವಿಭಾಗ.ಸಿದ್ದಾಪುರ ಇವರ ಅಭಿಯಾಚನಾ ಪತ್ರ ಸಂಖ್ಯೆ : ಕಾಇಂ/ ಕನೀನಿನಿ/ ನಂ- 2/ ವಾಜಯೋವಿ/ 2019-20/350 : ದಿನಾಂಕ : 25/06/2019

2. ತಹಶೀಲ್ದಾರರು ಬ್ರಹ್ಮಾವರ ತಾಲೂಕು ಇವರ ತನಿಖಾ ವರದಿ ಸಂಖ್ಯೆ : ಎಲ್‌ಎನ್ ಡಿ/ಪಿಪಿಡಿಆರ್/ ಸಿಆರ್/ 21/ 2019-20 ದಿನಾಂಕ : 28/02/2020
3. ಸಹಾಯಕ ಕಮೀಷನರು ಕುಂದಾಪುರ ಇವರ ಪ್ರಸ್ತಾವನೆ ಸಂಖ್ಯೆ : ಎಲ್‌ಎನ್ ಡಿ/ಸಿಆರ್/325/2019-20 ದಿನಾಂಕ :09/03/2020
4. ಈ ಕಛೇರಿಯ ಸಮ ಸಂಖ್ಯೆಯ ಪತ್ರ ದಿನಾಂಕ:20/08/2020
5. ಸರ್ಕಾರದ ಪತ್ರ ಸಂಖ್ಯೆ ಕಂಇ 66 ಎಲ್ ಜಿಪಿ 2020 ದಿನಾಂಕ: 12/10/2020

---------

ವಾರಾಹಿ ಏತ ನೀರಾವರಿ ಕಾಮಗಾರಿಗೆ ಅಗತ್ಯವಿರುವ ಅರಣ್ಯ ಜಮೀನಿಗೆ ಪರ್ಯಾಯವಾಗಿ ಉಡುಪಿ ಜಿಲ್ಲೆ, ಬ್ರಹ್ಮಾವರ ತಾಲೂಕು 33 ಶಿರೂರು ಗ್ರಾಮದ ಸ.ನಂಬ್ರ 121/ಪಿ1 ರಲ್ಲಿ 15.00 ಎಕ್ರೆ ಸರ್ಕಾರಿ ಜಮೀನನ್ನು ಅರಣ್ಯೀಕರಣ ಉದ್ದೇಶಕ್ಕಾಗಿ ಅರಣ್ಯ ಇಲಾಖೆಗೆ ಮಂಜೂರು ಮಾಡುವ ಬಗ್ಗೆ ಉಲ್ಲೇಖ (1) ರಲ್ಲಿ ಕಾರ್ಯಪಾಲಕ ಇಂಜಿನಿಯರ್.ಕರ್ನಾಟಕ ನೀರಾವರಿ ನಿಗಮ ನಿಯಮಿತ,ನಂ -2 ವಾರಾಹಿ ಜಲಾಶಯ ಯೋಜನಾ ವಿಭಾಗ,ಸಿದ್ದಾಪುರ ಇವರು ಅಭಿಯಾಚನಾ ಸಲ್ಲಿಸಿರುತ್ತಾರೆ.

ಸದರಿ ಅಭಿಯಾಚನಾ ಪತ್ರ ಪರಿಶೀಲಿಸಿ ತಹಶೀಲ್ದಾರರು ಬ್ರಹ್ಮಾವರ ಇವರು ತನಿಖೆ ನಡೆಸಿ ಸಹಾಯಕ ಕಮೀಷನರು ಕುಂದಾಪುರ ಇವರ ಮೂಲಕ ಸಲ್ಲಿಸಿರುವ ವರದಿಯಲ್ಲಿ ಬ್ರಹ್ಮಾವರ ತಾಲೂಕು 33 ಶಿರೂರು ಗ್ರಾಮದ ಸ.ನಂಬ್ರ 121/ಪಿ1 ರಲ್ಲಿ 15.00 ಎಕ್ರೆ ಸರ್ಕಾರಿ ಜಮೀನನ್ನು ವಾರಾಹಿ ಏತ ನೀರಾವರಿ ಕಾಮಗಾರಿಗೆ ಅಗತ್ಯವಿರುವ ಅರಣ್ಯ ಪ್ರದೇಶಕ್ಕೆ ಬದಲಾಗಿ ಅರಣ್ಯ ಇಲಾಖೆಯ ಹೆಸರಲ್ಲಿ ಕಾಯ್ದಿರಿಸಲು ಪ್ರಸ್ತಾಪಿಸಿರುವುದಾಗಿದೆ. ಪ್ರಸ್ತಾವಿತ ಜಮೀನು ಡೀಮ್ಡ್ ಅರಣ್ಯ ವ್ಯಾಪ್ತಿಯಲ್ಲಿದ್ದು, ಸದ್ರಿ ಸರ್ವೇ ನಂಬ್ರದಲ್ಲಿ ಒಟ್ಟು 88.48.25 ಎಕ್ರೆ ಸರಕಾರಿ ಅನಾಧೀನ ವಿಸ್ತೀರ್ಣವಿದ್ದು, ಈ ಪೈಕಿ ಡೀಮ್ಡ್ ಫಾರೆಸ್ಟ್ ಪಟ್ಟಿಯಲ್ಲಿ 40.00 ಎಕ್ರೆ ಜಮೀನು ಸೇರಿರುತ್ತದೆ. ಸದ್ರಿ 40.00 ಎಕ್ರೆ ಡೀಮ್ಡ್ ಫಾರೆಸ್ಟ್ ಜಮೀನಿನಲ್ಲಿಯೇ 15.00 ಎಕ್ರೆ ಜಮೀನನ್ನು ಅಧಿಕೃತವಾಗಿ ಅರಣ್ಯ ಇಲಾಖೆಗೆ ಬದಲಿ ಜಮೀನಾಗಿ ಹಸ್ತಾಂತರಿಸಬಹುದಾಗಿದೆ ಎಂದು ನೀಡಿರುವ ವರದಿಯ ಮೇರೆಗೆ ಸಹಾಯಕ ಕಮೀಷನರು ಕುಂದಾಪುರ ಇವರು ಸದರಿ ಜಮೀನನ್ನು ವಾರಾಹಿ ಏತ ನೀರಾವರಿ ಕಾಮಗಾರಿಗೆ ಪರ್ಯಾಯ ಅರಣ್ಯೀಕರಣ ಉದ್ದೇಶಕ್ಕಾಗಿ ಅರಣ್ಯ ಇಲಾಖೆ ಕಾಯ್ದಿರಿಸಬಹುದು ಎಂದು ಶಿಫಾರಸ್ಸು ಮಾಡಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಆದ್ದರಿಂದ ಕೋರಿಕೆ ಸಂಸ್ಥೆಯವರ ಕೋರಿಕೆ, ತಹಶೀಲ್ದಾರರು ಹಾಗೂ ಸಹಾಯಕ ಕಮೀಷನರ್ ಕುಂದಾಪುರ ಇವರ ಶಿಫಾರಸ್ಸು ವರದಿಗಳನ್ನು ಪರಿಶೀಲಿಸಿ ಉಲ್ಲೇಖ (4) ರಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು,ಉಲ್ಲೇಖ (5) ರ ಸರ್ಕಾರದ ಪತ್ರದಂತೆ ವಾರಾಹಿ ಏತ ನೀರಾವರಿ ಕಾಮಗಾರಿಗೆ ಅಗತ್ಯವಿರುವ 4.065 ಹೆಕ್ಟೇರ್ ಅರಣ್ಯ ಇಲಾಖೆಯ ಜಮೀನಿನ ಬದಲಿಗೆ ಉಡುಪಿ ಜಿಲ್ಲೆ, ಬ್ರಹ್ಮಾವರ ತಾಲೂಕು 33 ಶಿರೂರು ಗ್ರಾಮದ ಸ.ನಂಬ್ರ 121/ಪಿ1 ರಲ್ಲಿ 15.00 ಎಕ್ರೆ ಸರ್ಕಾರಿ ಜಮೀನನ್ನು ಅರಣ್ಯೀಕರಣ ಉದ್ದೇಶಕ್ಕಾಗಿ ಅರಣ್ಯ ಇಲಾಖೆಗೆ ಮಂಜೂರು ಮಾಡಿ ಹಸ್ತಾಂತರಿಸಲು ಸರ್ಕಾರವು ಅನುಮತಿಸಿದೆ.

ಉಲ್ಲೇಖ (5) ರ ಸರ್ಕಾರಿ ಆದೇಶದಂತೆ ವಾರಾಹಿ ಏತ ನೀರಾವರಿ ಕಾಮಗಾರಿಗೆ ಅಗತ್ಯವಿರುವ [illegible] ಹೆಕ್ಟೇರ್ ಅರಣ್ಯ ಇಲಾಖೆಯ ಜಮೀನಿನ ಬದಲಿಗೆ ಉಡುಪಿ ಜಿಲ್ಲೆ, ಬ್ರಹ್ಮಾವರ ತಾಲೂಕು 31 ಶಿರೂರು ಗ್ರಾಮದ ಸ.ನಂಬ್ರ 121/ಪಿ1 ರಲ್ಲಿ 15.00 ಎಕ್ರೆ ಸರ್ಕಾರಿ ಜಮೀನನ್ನು ಪರ್ಯಾಯ ಅರಣ್ಯೀಕರಣ ಉದ್ದೇಶಕ್ಕಾಗಿ ಅರಣ್ಯ ಇಲಾಖೆಗೆ ಈ ಕೆಳಕಂಡ ಷರತ್ತುಗೊಳಪಟ್ಟು ಮಂಜೂರು ಮಾಡಿದೆ

ಷರತ್ತುಗಳು:

1. ಮಂಜೂರಾದ ಜಮೀನನ್ನು ಯಾವ ಉದ್ದೇಶಕ್ಕಾಗಿ ಮಂಜೂರು ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಎರಡು ವರ್ಷದ ಅವಧಿಯೊಳಗೆ ಉಪಯೋಗಿಸತಕ್ಕದ್ದು.
2. ಮಂಜೂರಾದ ಭೂಮಿಯನ್ನು ವಿನಾಶಕಾರಿಯಾದ ಅಥವಾ ಕಾಯಂ ಆಗಿ ಹಾನಿಕಾರಕವಾಗುವ ರೀತಿಯಲ್ಲಿ ಬಳಸತಕ್ಕದ್ದಲ್ಲ.
3. ಅನುದಾನ ಮಾಡಲಾದ ಜಮೀನಿನಲ್ಲಿ ಅನಧಿಕೃತ ಅತಿಕ್ರಮಣವಾಗದಂತೆ ಕ್ರಮವಹಿಸತಕ್ಕದ್ದು.
4. ಮಂಜೂರು ಮಾಡಲ್ಪಡುವ ಜಮೀನಿನ ಮೇಲೆ ಯಾವುದೇ ನ್ಯಾಯಾಲಯದಲ್ಲಿ ದಾವೆಗಳು ದಾಖಲಾಗಿದ್ದಲ್ಲಿ ಈ ಮಂಜೂರಾತಿಯು ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ
5. ಅನುದಾನ ಮಾಡಲಾದ ಜಮೀನನ್ನು ಕಂದಾಯ ಇಲಾಖೆಯ ಅನುಮತಿ ಇಲ್ಲದೇ ಮಾರಾಟ ಮಾಡುವುದಾಗಲೀ ಗುತ್ತಿಗೆ/ಉಪ ಗುತ್ತಿಗೆ ನೀಡುವುದಾಗಲೀ ದಾನ,ಅಥವಾ ಯಾವುದೇ ರೀತಿಯ ಪರಭಾರೆಯನ್ನು ಮಾಡಬಾರದು
6. ಮಂಜೂರಾದ ಜಮೀನು ಅವಶ್ಯವಿಲ್ಲವೆಂದು ಕಂಡು ಬಂದಲ್ಲಿ ಕಂದಾಯ ಇಲಾಖೆಗೆ ಹಿಂದಿರುಗಿಸತಕ್ಕದ್ದು .
7. ಮಂಜೂರಾದ ಜಮೀನು 1969 ರ ಕರ್ನಾಟಕ ಭೂಮಂಜೂರಾತಿ ನಿಯಮಗಳಿಗೆ ಬದ್ಧವಾಗಿದೆ.
8. ಮಂಜೂರಾದ ಜಮೀನನ್ನು ತಹಶೀಲ್ದಾರರು ತಾಲೂಕು ಮೋಜಣಿದಾರರಿಂದ ಗಡಿ ಗುರುತುಗಳನ್ನು ನಿರ್ಧರಿಸಿ, ಕಂದಾಯ ನಿರೀಕ್ಷಕರ ಮುಖಾಂತರ ಸಂಬಂಧಿಸಿದವರಿಗೆ ಹಸ್ತಾಂತರಿಸಲು ಕ್ರಮಕೈಗೊಳ್ಳುವುದು

ಜಿಲ್ಲಾಧಿಕಾರಿ

ಉಡುಪಿ ಜಿಲ್ಲೆ, ಉಡುಪಿ

ಪ್ರತಿ.

1 ಉಪ ಅರಣ್ಯ ಸಂರಕ್ಷಣಾಧಿಕಾರಿ, ಕುಂದಾಪುರ ವಿಭಾಗ ಇವರಿಗೆ ಸೂಕ್ತ ಕ್ರಮಕ್ಕಾಗಿ

2 ಸಹಾಯಕ ಕಮೀಷನರು ಕುಂದಾಪುರ ಇವರಿಗೆ ಸೂಕ್ತ ಕ್ರಮಕ್ಕಾಗಿ

3 ತಹಶೀಲ್ದಾರರು ಬ್ರಹ್ಮಾವರ ತಾಲ್ಲೂಕು ಇವರಿಗೆ ಸೂಕ್ತ ಕಡತದೊಂದಿಗೆ ಮುಂದಿನ ಕ್ರಮಕ್ಕಾಗಿ ರವಾನಿಸುತ್ತಾ, ಈ ಆದೇಶದಂತೆ ಪಹಣಿ ಕಾಲಂ 9 ರಲ್ಲಿ ಮಂಜೂರಾತಿ ವಿವರ ದಾಖಲಿಸಿ ಗಣಕೀಕೃತ ಪಹಣಿ ಪ್ರತಿಯನ್ನು ಈ ಜಮೀನು ಹಸ್ತಾಂತರಿಸಿದ ಬಗ್ಗೆ ವರದಿಯೊಂದಿಗೆ ಈ ಕಚೇರಿಗೆ ಕಳುಹಿಸಿ ಕೊಡಲು ಸೂಚಿಸಿದೆ

4 ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ,ನಂ -2 ವಾರಾಹಿ ಜಲಾಶಯ ಯೋಜನಾ ವಿಭಾಗ,ಸಿದ್ದಾಪುರ - ಇವರಿಗೆ

5. ವಲಯ ಅರಣ್ಯ ಅಧಿಕಾರಿ ಶಂಕರನಾರಾಯಣ ವಲಯ- ಇವರಿಗೆ